ಕೊಳ್ಳಲಿ. ಮದುವೆ ಸುದ್ದಿ ಕೇಳಿ ಸುಮಿಯನ್ನು ಲಿಂಗನಗೌಡ ಪಾಟೀಲ ಕುಟುಂಬ ಮನೆಯಿಂದ ಬಹಿಷ್ಕರಿಸಬಹುದು. ಅವಳ ವಿದ್ಯಾಭ್ಯಾಸ ಪೂರ್ತಿಗೊಳಿಸುವ ಜವಾಬ್ದಾರಿ ನನ್ನ ಪಾಲಿಗೆ ಬರಬಹುದು. ಬರಲಿ, ಅದೇನು ನನಗೆ ಭಾರವಲ್ಲ. ಒಟ್ಟಾರೆ ಈ ಮಕ್ಕಳ ಪ್ರೇಮ ಮತ್ತು ಬದುಕು ಎರಡನ್ನೂ ಸಂಭಾಳಿಸುವ ಗುರುತರ ಹೊಣೆ ನನ್ನ ಮೇಲಿದೆ. ವಯಸ್ಸಿಗೆ ಮೀರಿದ ಜಾಣತನ ಸನ್ನಡತೆ ಅವರಲ್ಲಿರುವುದು ನಿಜವಾದರೂ, ನನ್ನ ಚಿಕ್ಕ ಮಾರ್ಗದರ್ಶನವು ಪರಿಸ್ಥಿತಿಯನ್ನು ನಿಭಾಯಿಸಲು ನೆರವಾಗಬಹುದು. ಆ ಜವಾಬ್ದಾರಿಯನ್ನು ನಾನು ಯಾವ ಬೆಲೆ ತೆತ್ತಾದರೂ ನಿರ್ವಹಿಸಲು ಸಿದ್ಧಳಿದ್ದೇನೆ. ಬಹುಶಃ ಅದುವೇ ನನ್ನ ಬದುಕಿನ ಸಾರ್ಥಕತೆಯೂ ಹೌದು! ಪ್ರೇಮವೆಂದರೆ ಗಾಳಿ, ನೀರು, ಬೆಳಕು ಹೀರಿ ಸಹಜವಾಗಿ ಅರಳುವ ಹೂವಿನಂತೆ. ಅದನ್ನು ನೋಡುವುದೇ ಚಂದ. ಆದರೆ ಅರಳುತ್ತಿರುವ ಹೂ ಹೊಸಕಿ ಹಾಕುವುದರ ಅರಿವಾಗಿಯೂ ಕಣ್ಮುಚ್ಚಿರುವುದು ಪಾಪದ ಕೆಲಸ. ಭೌತಿಕ ಪ್ರೇಮವನ್ನು ದಾಟಿ ಅನುಭಾವ ಪ್ರೇಮದತ್ತ ನನ್ನೊಲವು ಚಾಚುತ್ತಿದೆಯಾದರೂ, ಚಿಗುರು ಪ್ರೇಮವೊಂದು ಚಡಪಡಿಸುವುದನ್ನು ಕಂಡು ಸುಮ್ಮನಿರಲಾರೆ. ಅದರ ಅರಳುವಿಕೆಗೆ ಪ್ರಾಪಂಚಿಕ ನೆಲೆಯಲ್ಲಿಯೇ ಕ್ರಮ ಕೈಗೊಳ್ಳಬೇಕಾಗುತ್ತದೆ.

ಹಾಗಾದರೆ ತಾನೀಗ ಏನು ಮಾಡಬಹುದು? ಲಿಂಗನಗೌಡ ಪಾಟೀಲ ಮನೆಯವರ ಮನಃಪರಿವರ್ತನೆಯ ಪ್ರಯತ್ನಗಳು ಪೂರ್ತಿ ಯಶಸ್ವಿಯಾಗಿಲ್ಲ. ನಾಗತಿಹಳ್ಳಿ ಸರ್ ಅವರ ಕೃಪೆಯಿಂದ ಲಿಂಗಣ್ಣ ಸಾಕಷ್ಟು ಬದಲಾಗಿರುವುದು ನಿಜ. ಆದರೆ ಆ ಪ್ರಾಣಿಯನ್ನು ಪೂರ್ತಿಯಾಗಿ ನಂಬುವಂತೂ ಇಲ್ಲ. ಮೇಲಾಗಿ ಪಾಪದವನೆಂದು ಎಣಿಸಿದ್ದ ವಿರುಪಾಕ್ಷಿ ಹೊಸ ಅವತಾರದಲ್ಲಿ ತಲೆ ಎತ್ತಿರುವುದು! ಆ ದುಷ್ಟ ತಲೆಗೆ ನಾನು ಡಿಕ್ಕಿ ಹೊಡೆಯಲೇ ಬೇಕಿದೆ. ಆ ಪ್ರಕಾರ ನಾನು ಮಾಡಬೇಕಾದ ಮೊತ್ತಮೊದಲ ಕೆಲಸ ಇಬ್ಬರನ್ನೂ ವಿವಾಹ ನೋಂದಣಿ ಆಫೀಸಿಗೆ ಒಯ್ದು ರಿಜಿಸ್ಟರ್ ಮಾಡಿಸುವುದು. ಮುಂದಿನದು ಮುಂದೆ. ಆದರೆ ಈ ನನ್ಮಗ ವಿರುಪಾಕ್ಷಿ ಅಷ್ಟು ದಡ್ಡ ಅಲ್ಲ. ಅವನ ಕೈಗಳು ನೋಂದಣಿ ಆಫೀಸಿನಲ್ಲೂ ಇರುವ ಸಾಧ್ಯತೆಯಿದೆ. ಅವನ ಚೇಲಾಗಳು ಗುಲ್ಬರ್ಗಾದಲ್ಲಿ ರಿಜಿಸ್ಟರ್ ಆಗದಂತೆ ನೋಡಿಕೊಳ್ಳಲೂಬಹುದು. ಬೇರೆಡೆಗೆ? ಹೌದು, ಕಾರವಾರದಲ್ಲಿ ರಿಜಿಸ್ಟರ್ ಮಾಡಿಸಿದರೆ ಹೇಗೆ? ಪ್ರೀತಂನ ತಾಯಿಯ ಅನುಮತಿ ಮತ್ತು ಆಶೀರ್ವಾದವೂ ಸಿಕ್ಕಂತಾಗುತ್ತದೆ. ಹೇಗೋ ಲಿಂಗಣ್ಣನಿಗೆ ಮತ್ತು ನೀಲವ್ವ ಅತ್ತಿಗೆಗೆ ನಾಲ್ಕು ದಿನ ಸುಮಿಯನ್ನು ನಾನೇ ಇಟ್ಟುಕೊಳ್ಳುತ್ತೇನೆ ಅಂದಿದ್ದೇನೆ. ಎಷ್ಟೋ ದಿನಗಳಿಂದ ಕೂಡಿಟ್ಟ ಹುಡುಗಿ ಸ್ವಲ್ಪ ಚೇತರಿಸಿಕೊಳ್ಳಲಿ ಎಂದು ಅವರೂ 'ಹೂಂಕಣವ್ವ, ಜ್ವಾಪಾನ' ಅಂದಿದ್ದಾರೆ. ಮೊನ್ನೆ ಹೋಟೆಲ್ ಗಾರ್ಡನ್ನಿನಲ್ಲಿ ಪ್ರಜ್ಞೆ ತಪ್ಪಿ ಬಿದ್ದಾಗಿನಿಂದ ಲಿಂಗಣ್ಣನ ಮನಸ್ಸು ಕುಗ್ಗಿಹೋಗಿದೆ. ತನ್ನ ಜಾಣೆ ಮಗಳನ್ನು ಅದೆಷ್ಟು ಪ್ರೀತಿಸುತ್ತಾನೆಂದರೆ ಅವಳಿಗೇನಾದರೂ ಮಾನಸಿಕವಾದರೆ... ಎಂಬ ಚಿಂತೆಯಲ್ಲಿ ಅವನ ದರ್ಪ, ಅಹಂಕಾರ, ಪ್ರತಿಷ್ಠೆ ಎಲ್ಲವೂ ಮೆತ್ತಗಾಗಿವೆ. ಈಗ ಅವನ ಮನಸ್ಸಿಗೆ ಸಹೋದರಿ ಶೈಲಾಳೇ ತನ್ನ ಮಗಳನ್ನೂ ಮಾನವನ್ನೂ ಮನಸ್ಸನ್ನೂ ಕಾಪಾಡಬಲ್ಲವಳು ಎಂಬ ವಿಶ್ವಾಸ ಕೂತುಹೋಗಿದೆ. ಹೀಗಾಗಿಯೇ ಮಗನ ಕಟ್ಟುನಿಟ್ಟು ಆದೇಶವಿದ್ದರೂ ಸುಮಿಯನ್ನು ತನ್ನಲ್ಲಿ ಉಳಿಯಲು ಬಿಟ್ಟದ್ದು. ಕಾರ್ ಮಾಡಿ ಮಕ್ಕಳಿಬ್ಬರನ್ನೂ ಕಾರವಾರಕ್ಕೆ ಕರೆದೊಯ್ದೇನೆ. ಮಕ್ಕಳಿಗೆ ಅಲ್ಲಿ ಸುತ್ತಾಡಿದರೆ ಮನಸು ಹಗುರಾದಂತೆಯೂ ಆಯ್ತು, ಸಬ್ ರಿಜಿಸ್ಟ್ರಾರ ಆಫೀಸಿನಲ್ಲಿ ಫಾರ್ಮಾಲಿಟಿಗಳನ್ನ ಭರ್ತಿ ಮಾಡಿದಂತೆಯೂ ಆಯ್ತು... ಒಮ್ಮೆ ರಿಜಿಸ್ಟರ್ ಆಗಿ ಸರ್ಟಿಫಿಕೇಟು ಕೈಗೆ ಸಿಕ್ಕಮ್ಯಾಲ ಲಿಂಗನಗೌಡ ಮನೆತನದ ಹಾರಾಟ ಇಳಿಯುತ್ತದೆ. ನಾನು ಮಾಡುತ್ತಿರುವುದು ವಿಶ್ವಾಸದ್ರೋಹವೇ ಇರಬಹುದು. ಆಲ್ ಈಸ್ ಫೇರ್ ಇನ್ ಲವ್!

***

ಕಾರು ವೇಗವಾಗಿ ಓಡುತ್ತಿತ್ತು. ಜೇವರ್ಗಿ ದಾಟಿ ಬರುವಷ್ಟರಲ್ಲಿ ನಸುಕು ಹರಿದಿತ್ತು. ವಿಶಾಲ ಬಯಲ ಅಂಚಿಗೆ ಕೆಂಪೇರುತ್ತಿದ್ದ ಆಕಾಶವನ್ನು ಪ್ರೀತಂ ವಿಸ್ಮಯದಲ್ಲಿ ನೋಡುತ್ತಿದ್ದ. ಶೈಲತ್ತೆ ಅಚಾನಕ್ ಆಗಿ ಮಾಡಿದ ಪ್ಲಾನ್ ಅವನನ್ನು ಸಮ ರಾತ್ರಿವರೆಗೂ ಎಚ್ಚರದಲ್ಲಿಟ್ಟಿತ್ತು. ಊರಿಗೆ ಹೋಗುವುದು ಪಕ್ಕಾ ಆಗಿತ್ತಾದರೂ ಹೀಗೆ ಸುಮಿ ಮತ್ತು ಶೈಲತ್ತೆ ಜೊತೆಗೆ ಹೋಗುವಂಥ ಅವಕಾಶ ಅನಿರೀಕ್ಷಿತವಾಗಿತ್ತು. ರಾತ್ರಿ ಬಹಳ ಹೊತ್ತಿನವರೆಗೂ ಶೈಲತ್ತೆ ಪ್ರಸ್ತಾಪಿಸಿದ್ದ ಮದುವೆ ವಿಷಯ ತಮಾಷೆಯೆನಿಸಿ ನಗು ಬರುತ್ತಿತ್ತು. ನಿಜ, ಸುಮಿಯಿಲ್ಲದೇ, ಸುಮಿಯ ಪ್ರೇಮವಿಲ್ಲದೇ ತನ್ನ ಭವಿಷ್ಯದ ಬದುಕನ್ನು ಕಲ್ಪಿಸಿಕೊಳ್ಳುವುದೂ ಈಗ ಅಸಾಧ್ಯ. ಹಾಗಂತ ನಿಂತ ಮೆಟ್ಟಿನಲ್ಲಿ ಮದುವೆ!

'ನಿಮ್ಮ ಪ್ರೇಮವನ್ನು ಹೊಸಕಿ ಹಾಕುವ ಶಕ್ತಿಗಳು ಬಲಿಷ್ಠವಾಗ್ಯವ; ಖತರ್ನಾಕ್ ಕೂಡ ಅಗ್ಯವ. ಈ ಮದುವೆ ಅನ್ನೋದು ನಿಮ್ಮ ಪ್ರೇಮವನ್ನು ಹಾಸಿಲ್ ಮಾಡಿಕೊಳ್ಳುವ ಒಂದು ಸ್ಟ್ರೆಟಜಿ' ಎಂದಿದ್ದಳು ಶೈಲತ್ತೆ. ತನಗೀಗ ಬರೀ ಹತ್ತೊಂಬತ್ತು. ಆದರೆ ಸ್ಕೂಲ್ ಸರ್ಟಿಫಿಕೇಟಿನ ಪ್ರಕಾರ ತನ್ನ ವಯಸ್ಸು ಇಪ್ಪತ್ತೊಂದು ಆಗಿರುವುದು ನಿಜ. ಮೀನು ಮಾರಲು ಹೋಗುವಾಗ ಮಗ ಬೆನ್ನು ಹತ್ತುತ್ತಾನೆ ಎಂದು ಆಯಿ ನಾಲ್ಕನೇ ವರ್ಷಕ್ಕೇ ಹತ್ತಿರದ ಕನ್ನಡ ಶಾಲೆಗೆ ಕಳಿಸಿದ್ದಳು. ಶಾಲಿ ಮಾಸ್ತರು ಆರು ವರ್ಷ ಆದವರಿಗೆ ಮಾತ್ರ ಶಾಲೆಗೆ ಸೇರಿಸುವುದು ಸರಕಾರಿ ನಿಯಮ, ಎಂದು ಹೊರಗೆ ಹಾಕಿದ್ದರು. ಹತ್ತಿರ ಬಾಲವಾಡಿಯೂ ಇರಲಿಲ್ಲ. ಆಯಿ ಏನಾದ್ರೂ ಮಾಡಿ ಎಂದು ಮಾಸ್ತರರ ಕಾಲಿಗೆ ಬಿದ್ದಾಗ ಪ್ರೀತಂನ ಜನ್ಮದಿನಾಂಕವನ್ನು ತಿದ್ದಿ ಆರು ವರ್ಷ ಮಾಡಿ ಎಡ್ಮಿಶನ್ ಕೊಟ್ಟಿದ್ದರು.

ಈ ವಿಷಯವನ್ನು ಆಯಿ ಆಗಾಗ ನೆನಪಿಸಿಕೊಳ್ಳುತ್ತಾಳಾದರೂ ಆ ಬಗ್ಗೆ ತಾನಾಗಲಿ ಆಯಿಯಾಗಲಿ ಖುಷಿಯಾಗುವುದೋ ಅಥವಾ ಬೇಸರ ಪಟ್ಟುಕೊಳ್ಳುವುದೋ ಮಾಡುತ್ತಿರಲಿಲ್ಲ. ರೊಡ್ರಿಗ್ಸ್ ಸರ್ ಮಾತ್ರ 'ಸ್ಪೋರ್ಟ್ಸಿನಲ್ಲಿ ಎರಡು ವರ್ಷ ಅಂದ್ರೆ ಭರಪೂರ್ ಫರಕು ಬೀಳ್ತದೆ, ಶೈ' ಎಂದು ಯಾವಾಗಲೂ ಆಯಿಗೆ ಬೈತಿರ್ತಾರೆ.

ಅಂತೂ, ಶಾಲೆ ಮಾಸ್ತರಿಂದಾಗಿ ಹತ್ತೊಂಬತ್ತರ ವಯಸ್ಸಲ್ಲಿ ಮದುವೆ ಭಾಗ್ಯ! ಪ್ರೀತಂನಿಗೆ ನಗು ಬಂತು. 'ಯಾಕೋ ಒಬ್ನೇ ನಗಾಡ್ತಿ?' ಅಂದಳು ಶೈಲತ್ತೆ. 'ಮದುವೆಯೆನಲು ಹಾಸ್ಯವೇ? ಎಂಬ ಸುಮಿಯ ಸಾಲು ನೆನಪಾಯಿತು' ಅಂದ. 'ಏ ಕೋತಿ, ಅದು ಪ್ರೇಮವೆನಲು ಹಾಸ್ಯವೇ? ಕೆ.ಎಸ್. ನರಸಿಂಹಸ್ವಾಮಿಯವರ ಕವಿತೆಯ ಸಾಲು' ಅಂದಳು ಸುಮಿ. ಶೈಲತ್ತೆ ಅವರ ಜಗಳ ಬಿಡಿಸಿ, 'ಮದುವೆ ಬಗ್ಗೆ ಹಗುರದಲ್ಲಿ ಮಾತಾಡಬ್ಯಾಡ ತಮ್ಮ, ಈ ಸಮಾಜ ಮದುವೆಗೇ ಮಾನ್ಯತೆ ಕೊಡತೈತಿ ವಿನಃ ಪ್ರೀತಿ ಪ್ರೇಮಕ್ಕಲ್ಲ. ಅದ್ಕ ನಿಮ್ಮ ಪ್ರೀತಿ ಉಳ್ಸಕೊಬೇಕು ಅಂದ್ರ ಮದುವಿ ಅನಿವಾರ್ಯ ಐತಿ. ಈ ವ್ಯವಸ್ಥೆ ಸರಿ ಅಲ್ಲ ಅಂತ ಗೊತ್ತೈತಿ. ಪ್ರೇಮಕ್ಕೆ ಹೆಚ್ಚಿನ ಮಾನ್ಯತೆ, ಗೌರವ ಕೊಡಬೇಕು ಅನ್ನೋಳು ನಾ. ಸಮಾಜದಲ್ಲಿ ಪ್ರೇಮವನ್ನು ಸಹಜವಾಗಿ ಸ್ವೀಕರಿಸುವಂತ ಪರಿವರ್ತನೆ ಆಗಬೇಕು. ಈ ಜಗತ್ತಿನಲ್ಲಿ ಅತ್ಯಂತ ಪರಿಶುದ್ಧವಾದದ್ದು ಇದ್ದರೆ ಅದು ಪ್ರೇಮವೇ! ಅಂಥ ದಿವ್ಯವಾದ ಹೂರಣ ಬಿಟ್ಟು ಜನ ಸಿಪ್ಪೆನ ಚಪ್ಪರಿಸುತ್ತಾರ' ಎಂದಳು.

ಒಮ್ಮೊಮ್ಮೆ ಮಮತೆಯ ತಾಯಿಯಂತೆ, ಇನ್ನೊಮ್ಮೆ ತತ್ವಜ್ಞಾನಿಯಂತೆ, ಮಗದೊಮ್ಮೆ ನ್ಯಾಯವಾದಿಯಂತೆ ಕಾಣುವ ಶೈಲತ್ತೆ ಬಗ್ಗೆ ಗೌರವ ಮೂಡಿತು. 'ಉದಾಹರಣೆಗೆ ಇಟ್ಕೋ, ನೀನು ಸುಮಿನ ನಿಮ್ಮೂರಿಗೆ ಒಯ್ಯುವಾಗ ವಿರುಪಾಕ್ಷಿ ನಿನ್ ಮ್ಯಾಲೆ ಸಹೋದರಿಯನ್ನು ಕಿಡ್ನ್ಯಾಪ್ ಮಾಡ್ಯಾನ ಅಂತ ಕಂಪ್ಲೇಂಟ್ ಕೊಟ್ಟು ಅರೆಸ್ಟ್ ಮಾಡ್ಸಬಹುದು. ಆಗ ನೀನು ಪೊಲೀಸರಿಗೆ ನಾವಿಬ್ರೂ ಲವ್ ಮಾಡ್ತಿವಿ, ಅಂತ ಹೇಳಿದ್ರ ಕೇಳೋದಿಲ್ಲ. ಕಾನೂನು ಹೋರಾಟದ ವಿಷ್ಯ ಆಮ್ಯಾಲೆ. ಅವ್ನು ತನ್ನ ಹಣಬಲ ಕೂಡ ಬಳ್ಸಕೋತಾನೆ. ಅದೇ, ಒಂದ್ವೇಳೆ ಕಾನೂನು ಪ್ರಕಾರ ಮದ್ವೆ ರಿಜಿಸ್ಟರ್ ಆಗಿದ್ರೆ ಅದು ನಿಮ್ಮ ಪ್ರೇಮನ ರಕ್ಷಣೆ ಮಾಡತೈತಿ, ತಿಳಿತೇನು?' ಅಂದಳು. 'ಯಸ್ ಯುವರ್ ಆನರ್!' ಎಂದು ನಾಟಕೀಯವಾಗಿ ನಮಸ್ಕರಿಸಿದ.

ತನ್ನ ಜೊತೆ ಊರಿಗೆ ಸುಮಿಯೂ ಬರುವಂಥ ಸನ್ನಿವೇಶ ಏರ್ಪಟ್ಟ ಖುಶಿಯಿಂದಲೇ ಪ್ರೀತಂ ಉತ್ತೇಜಿನಾಗಿದ್ದ. ಹೀಗಾಗಿ ಶೈಲತ್ತೆಯ ಮದುವೆ ಪ್ರಸ್ತಾಪದ ಬಗ್ಗೆ ತುಂಬಾ ತಲೆಕೆಡಿಸಿಕೊಳ್ಳಲಿಲ್ಲ. ಬಹುಶಃ ಇದೂ ಕೂಡ ಇತ್ತೀಚೆಗೆ ಸಿನಿಮೀಯ ಆಗುತ್ತಿರುವ ತನ್ನ ಜೀವನದ ಮುಂದುವರಿದ ಭಾಗ ಎಂದುಕೊಂಡ. ರಾತ್ರಿಯೆಲ್ಲ ಏನೇನೋ ಯೋಚಿಸುತ್ತಾ ನಿದ್ರಿಸುವುದು ವಿಳಂಬವಾಗಿತ್ತು. ಬೆಳಕು ಹರಿಯುವ ಮೊದಲೇ ಹೋಟೆಲ್ ಚೆಕ್ಔಟ್ ಮಾಡಿ, ಕಾರಿಗಾಗಿ ಕಾದಿದ್ದ. ಹೀಗಾಗಿ ಸಮ ನಿದ್ದೆ ಆಗದೇ ಈಗ ಅವನ ಕಣ್ತೂಗಿ ಬರುತ್ತಿದ್ದವು. ಆದರೆ ಬಯಲು ಸೀಮೆಯ ಆ ವಿಶಾಲ ಭೂಮಿಯ ಅಂಚಿನಲ್ಲಿ ಸೂರ್ಯ ರಂಗಪ್ರವೇಶಿಸುವ ದೃಶ್ಯ ಅವನನ್ನು ಜಾಗರಗೊಳಿಸಿತ್ತು.

ಕಾರವಾರದಲ್ಲಿ ಕಾಣುವ ಸೂರ್ಯೋದಯದಲ್ಲೂ ಬಯಲು ಸೀಮೆಯ